ಅ) ರಾಜ್ಯದ ರೈತರಿಗೆ ಅದರಲ್ಲೂ ಪರಿಶಿಷ್ಟ ಜಾತಿ ಹಾಗೂ ಪರಿಶಿಷ್ಟ ಪಂಗಡದವರಿಗೆ ವ್ಯವಸಾಯ ಪರಿಕರಗಳನ್ನು 1995-96 ನೇ ಸಾಲಿನಲ್ಲಿ ಬಿಡುಗಡೆ ಮಾಡಲು ಸರ್ಕಾರದವರು ಉದ್ದೇಶಿಸಿರುವುದೆ?

ಶ್ರೀ. ಸಿ. ಬೈರೇಗೌಡ (ಕೃಷಿ ಸಚಿವರು) :-

ಅ) ಉದ್ದೇಶಿಸಿದೆ. ಹಾಗೂ ವಿಶೇಷವಾಗಿ ವಿಶೇಷ ಘಟಕ ಯೋಜನೆ ಹಾಗೂ ಗಿರಿಜನ ಉಪಯೋಜನೆ ಇವುಗಳಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರಿಗೆ ಕೃಷಿ ಪರಿಕರಗಳಾದ ಬೀಜ, ರಸಗೊಬ್ಬರ, ಸಸ್ಯಸಂರಕ್ಷಣಾ ಔಷಧಿ, ಕೃಷಿ ಉಪಕರಣ ಇವು ಗಳನ್ನು ಒದಗಿಸುವ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿದೆ. ಇದಕ್ಕಾಗಿ 1995-96ನೇ ಸಾಲಿನಲ್ಲಿ ರಾಜ್ಯ ವಲಯದ ಯೋಜನೆ, ಜಿಲ್ಲಾವಲಯದ ಪಂಚಾಯಿತಿ ಯೋಜನೆಯಡಿ ಈ ಕೆಳ ಕಂಡಂತೆ ಅನುದಾನವನ್ನು ಮೀಸಲಿಡಲಾಗಿದೆ.

ಮೊತ್ತ ಲಕ್ಷ ರೂ ಗಳಲ್ಲಿ

	ವಿಶೇಷ ಘಟಕಯೋಜನೆ	ಗಿರಿಜನ ಉಪ ಯೋಜನೆ	ಗುರಿಹಾಕಿಕೊಳ್ಳಲಾಗಿರುವ ಫಲಾನುಭವಿಗಳ ಸಂಖ್ಯೆ ವಿ.ಘ್.ಯೊ.	ಗಿ.ಉ.ಯೋ
1. ರಾಜ್ಯ ವಲಯ.	33.00	14.25	1650	1787
2. ಜಿಲ್ಲಾ ವಲಯ.	44.04	7.96	2111	995
3. ವಿಶೇಷ ಕೇಂದ್ರ ಸಹಾಯಧನ	-	16.58	-	2073
ಒಟ್ಟು	77.04	30.79	3761	4855

ಇದಲ್ಲದೆ ಕೇಂದ್ರ ಪುರಸ್ಕೃತ ವಿಕದಳ ಧಾನ್ಯ ಯೋಜನೆ ಎಣ್ಣೆಕಾಳು ಹಾಗೂ ಬೇಳೆ ಕಾಳು ಉತ್ಪಾದನಾ ಯೋಜನೆ ಕೇಂದ್ರ ಪುರಸ್ಕೃತ ಹತ್ತಿ ಅಭಿವೃದ್ಧಿ ಯೋಜನೆಗಳಲ್ಲೂ ಸಹ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ರೈತರುಗಳಿಗೆ ಬಿತ್ತನೆ ಬೀಜ, ಸುಧಾರಿತ ಕೃಷಿ ಉಪಕರಣಗಳು, ತುಂತುರು ನೀರಾವರಿ ಉಪಕರಣಗಳು, ಮುಂತಾದವನ್ನು ಒದಗಿಸುವ ಕಾರ್ಯ ಕ್ರಮವನ್ನು ಹಾಕಿಕೊಳ್ಳಲಾಗಿದೆ.

ವಿಷಯ :- ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳ ಸಂಖ್ಯೆ.

ಚುಕ್ಕೆ ರಹಿತ ಪ್ರಶ್ನೆ ಸಂಖ್ಯೆ 2288 (2964)

ಶ್ರೀ ಚಂದ್ರಣ್ಣ (ದೇವನಹಳ್ಳಿ) :- ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಕರ್ನಾಟಕ ರಾಜ್ಯದಲ್ಲಿ ಒಟ್ಟು ಬರತಕ್ಕ ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕು ಗಳೆಷ್ಟು?

ಆ) ಎಷ್ಟು ಪ್ರಾಥಮಿಕ ಭೂ ಅಭಿವೃದ್ಧಿ ಬ್ಯಾಂಕುಗಳು ಲಾಭದಲ್ಲಿವೆ? ಹಾಗಿದ್ದಲ್ಲಿ ಯಾವ ಯಾವ ಬ್ಯಾಂಕುಗಳು ಲಾಭದಲ್ಲಿವೆ.

ಇ) ನಷ್ಟದಲ್ಲಿ ಇರತಕ್ಕ ಬ್ಯಾಂಕುಗಳ ಬಗ್ಗೆ ಯಾವ ರೀತಿ ಸರ್ಕಾರ ಕ್ರಮ ಕೈಗೊಂಡಿದೆ.

ಶ್ರೀ ಎಸ್. ಎಸ್. ಪಾಟೀಲ್ : (ಸಹಕಾರ ಸಚಿವರು) :-

ಅ) ಕರ್ನಾಟಕ ರಾಜ್ಯದಲ್ಲಿ ಒಟ್ಟು 177 ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳು ಇರುತ್ತವೆ.

ದಿನಾಂಕ : 31-03-1994 ರ ಅಂತ್ಯಕ್ಕೆ

ಆ) 5 ಬ್ಯಾಂಕುಗಳು ಲಾಭದಲ್ಲಿರುತ್ತದೆ. ಅವುಗಳಲ್ಲಿ ಈ ಕೆಳಕಂಡಂತಿರುತ್ತವೆ.

1) ಕರಿಮನೆ ಪ್ರಾಥಮಿಕ ಕೃಷಿ ಗ್ರಾಮೀಣ ಅಭಿವೃದ್ಧಿ ಬ್ಯಾಂಕು, ಚಿಕ್ಕಮಗಳೂರು ಜಿಲ್ಲೆ.

2) ಪುತ್ತೂರು ಪ್ರಾಥಮಿಕ ಕೃಷಿ ಗ್ರಾಮೀಣ ಅಭಿವೃದ್ಧಿ ಬ್ಯಾಂಕು, ದಕ್ಷಿಣ ಕನ್ನಡ ಜಿಲ್ಲೆ.

3) ಬಂಟ್ವಾಳ ಪ್ರಾಥಮಿಕ ಕೃಷಿ ಗ್ರಾಮೀಣ ಅಭಿವೃದ್ಧಿ ಬ್ಯಾಂಕು, ದಕ್ಷಿಣ ಕನ್ನಡ ಜಿಲ್ಲೆ.

4) ಬೆಳ್ತಂಗಡಿ ಪ್ರಾಥಮಿಕ ಕೃಷಿ ಗ್ರಾಮೀಣ ಅಭಿವೃದ್ಧಿ ಬ್ಯಾಂಕು, ದಕ್ಷಿಣ ಕನ್ನಡ ಜಿಲ್ಲೆ.

5) ಸೂಳ್ಯ ಪ್ರಾಥಮಿಕ ಕೃಷಿ ಗ್ರಾಮೀಣ ಅಭಿವೃದ್ಧಿ ಬ್ಯಾಂಕು, ದಕ್ಷಿಣ ಕನ್ನಡ ಜಿಲ್ಲೆ.

ಇ) ಪ್ರಾಥಮಿಕ ಸಹಕಾರ ಕೃಷಿ ಮತ್ತು ಗ್ರಾಮೀಣಾಭಿವೃದ್ಧಿ ಬ್ಯಾಂಕುಗಳ ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು 5 ವರ್ಷಗಳ ಅಭಿವೃದ್ಧಿ ಕ್ರಿಯಾ ಯೋಜನೆಗಳನ್ನು ನಬಾರ್ಡ್ ರವರ ಸಹಯೋಗದೊಂದಿಗೆ ತಯಾರಿಸಲಾಗಿದೆ. ಈ ಉದ್ದೇಶಕ್ಕಾಗಿ ಜಿಲ್ಲಾ ಮಟ್ಟದಲ್ಲಿ ಮತ್ತು ರಾಜ್ಯ ಮಟ್ಟದಲ್ಲಿ ಅನುಷ್ಠಾನ ಹಾಗೂ ವಿಮರ್ಶೆ ಸಮಿತಿಗಳನ್ನು ರಚಿಸಲಾಗಿದೆ. ಇದನ್ನು ಬೆಂಬಲಿಸಲು ಸರ್ಕಾರವು ಕೆಳಗೆ ಕಾಣಿಸಿದ ಯೋಜನೆಗಳನ್ನು ತಯಾರಿಸಿದೆ, ಇದಕ್ಕೆ ಮಾಡಿರುವ ಅವಕಾಶಗಳನ್ನು ತೋರಿಸಿದೆ.

ಯೋಜನೆಯ ವಿವರ	1994-95 ನೇ ಸಾಲಿನ ಮಂಜೂರಾತಿ	195-96ನೇ ಸಾಲಿಗೆ ಮಾಡಿರುವ ಅವಕಾಶ
1) ಪ್ರಾಥಮಿಕ ಬ್ಯಾಂಕುಗಳಿಗೆ ಷೇರು ಬಂಡವಾಳ.	50-00 ಲಕ್ಷ	25-00 ಲಕ್ಷ
2) ರಾಜ್ಯ ಬ್ಯಾಂಕಿನ ಮತ್ತು ಪ್ರಾಥಮಿಕ ಬ್ಯಾಂಕುಗಳ ಮದ್ಯೆ ಇರುವ ಬಾಕಿ ಸಾಲದ ಮೊತ್ತದ ಅಂತರವನ್ನು ಸರಿದೂಗಿಸಲು ಸಹಾಯ ಧನ	16-00 ಲಕ್ಷ	25-00 ಲಕ್ಷ
3) ಪುನರ್ಧನ ಸಹಾಯ ನೀಡಲು ಅನರ್ಹವಾಗಿರುವ ಪ್ರಾಥಮಿಕ ಸಹಕಾರಿ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕುಗಳ ಪರಿಶಿಷ್ಟ ಜಾತಿ ಸದಸ್ಯರಿಗೆ ಸಾಲ ನೀಡಲು ಕರ್ನಾಟಕ ರಾಜ್ಯ ಸಹಕಾರ ಕೃಷಿ ಮತ್ತು ಗ್ರಾಮೀಣ ಅಭಿವೃದ್ಧಿ ಬ್ಯಾಂಕಿಗೆ ಸಾಲ	80-00 ಲಕ್ಷ	270-00 ಲಕ್ಷ